## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ, ಹಿರಿಯೂರು

ಸಿ.ಸಿ.ನಂ.1187/2021

ಪಿರ್ಯಾದಿ : ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ಗೋಪಾಲಪ್ಪ ಸಿ .
ತಂದೆ ಚಿಕ್ಕಣ್ಣ , 45 ವರ್ಷ,
ಎಪಿ.39.ಬಿಜಡ್.4826 ರ ಮೋಟಾರ್ ಸೈಕಲ್ ಸವಾರ,
ವಾಸಃ ಯಲ್ಲದಕೆರೆ, ಕೆ ಕೆ. ಹಟ್ಟಿ ಗ್ರಾಮ,
ಹಿರಿಯೂರು ತಾಲೂಕು.

### ಆ ಪಾ ದ ನೆ

ದಿನಾಂಕಃ 02.10.2020 ರಂದು ರಾತ್ರಿ 8.15 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಯಲ್ಲದಕೆರೆ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಕೆ.ಕೆ ಹಟ್ಟಿ ಗ್ರಾಮದ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಎಪಿ.39.ಬಿಜಡ್.4826 ರ ಮೋಟಾರ್ ಸೈಕಲ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜಂಗ್ಲಿ ಈರಪ್ಪ ರವರಿಗೆ ಡಿಕ್ಕಿಪಡಿಸಿದ ಪರಿಣಾಮ ಅವರ ಎಡಗಾಲಿಗೆ, ಸೊಂಟಕ್ಕೆ ಮೈಕೈಗೆ ಪೆಟ್ಟುಗಳು ಬಿದ್ದು ಹಿರಿಯೂರು , ಚಿತ್ರದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರೂ ಗುಣಮುಖರಾಗದೇ ದಿಃ 24.10.2020 ರಂದು ರಾತ್ರಿ 8.30 ರ ಸಮಯದಲ್ಲಿ ಸೀಗೆಹಟ್ಟಿ ಗ್ರಾಮದ ತನ್ನ ಮನೆಯಲ್ಲಿ ಮೃತ ಪಟ್ಟಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 279 ಮತ್ತು 304(ಎ) ರಂತೆ ದಂಡಿಸಲ್ಪಡುವ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

(ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **01.12.2022**
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು